ಸಿರಿಗನ್ನಡಂ ಗೆಲ್ಗೆ

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು

# ವಾರ್ಷಿಕ ಘಟಿಕೋತ್ಸವ

ಘಟಿಕೋತ್ಸವ ಭಾಷಣ

ಡಾ|| ಸಿದ್ಧಯ್ಯ ಪುರಾಣಿಕ

ಅವರಿಂದ

20–2–1986

ಸಿರಿಗನ್ನಡಂ ಗೆಲ್ಗೆ

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು

# ವಾರ್ಷಿಕ ಘಟಿಕೋತ್ಸವ

ಘಟಿಕೋತ್ಸವ ಭಾಷಣ

ಡಾ|| ಸಿದ್ಧಯ್ಯ ಪುರಾಣಿಕ

ಅವರಿಂದ

20–2–1986

ಸಮಾರಂಭದ ಅಧ್ಯಕ್ಷರೂ, ಕರ್ನಾಟಕದ ವಿದ್ಯಾ ಮಂತ್ರಿಗಳೂ ಆದ ಮಾನ್ಯಶ್ರೀ
ಎಂ. ರಘುಪತಿ ಅವರೆ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ
ಅಧ್ಯಕ್ಷರಾದ ಶ್ರೀ ಕೆ. ಶಾಂತಯ್ಯನವರೆ, ಮಂಡಳಿಯ ಸದಸ್ಯರೆ,
ಪ್ರಥಮ ಶ್ರೇಣಿಯ ವಿದ್ಯಾರ್ಥಿಮಿತ್ರರೆ, ಸೋದರ ಸೋದರಿಯರೆ,

ಈ ಮಂಡಳಿಯ ಘಟಿಕೋತ್ಸವ ವೈಶಿಷ್ಟ್ಯ ಪೂರ್ಣವಾದುದು. ಇದ
ರಲ್ಲಿ ಈ ಮಂಡಳಿಯು ನಡಸುವ ಸಂಸ್ಕೃತ ವಿದ್ವತ್ ಪರೀಕ್ಷೆಯಲ್ಲಿ ಉತ್ತೀ
ರ್ಣರಾದವರಿಗೆ ಪ್ರಶಸ್ತಿ ಪತ್ರಗಳ ವಿತರಣೆ ಜರುಗುತ್ತದೆ. ಕನ್ನಡ
ಪಂಡಿತ, ಹಿಂದಿ ವಿದ್ವಾನ್, ಉರ್ದು ಮುನ್ಷಿ ಪರೀಕ್ಷೆಗಳಲ್ಲಿಯೂ, ಸಂಗೀತ
ಹಾಗೂ ಚಿತ್ರ ಕಲಾ ಪರೀಕ್ಷೆಗಳಲ್ಲಿಯೂ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣ
ರಾಗಿರುವ ಅಭ್ಯರ್ಥಿಗಳಿಗೆ ಪ್ರಶಸ್ತಿ ಪತ್ರ ಹಾಗೂ ಬಹುಮಾನಗಳ ವಿತರಣೆ
ನಡೆಯುತ್ತದೆ. ಶಿಕ್ಷಣಾಭಿಮಾನಿಗಳು ಇರಿಸಿರುವ ದತ್ತಿ ನಿಧಿಗಳಿಂದಲೂ
ಬಹುಮಾನಗಳ ಕೊಡುಗೆ ನಡೆಯುತ್ತದೆ. ಇಂಥ ವಿಶೇಷತೆಗಳನ್ನು ಒಳ
ಗೊಂಡ ಈ ಘಟಿಕೋತ್ಸವದಲ್ಲಿ ಘಟಿಕೋತ್ಸವ ಭಾಷಣ ಮಾಡಲು ಎರ
ಡನೆಯ ಸಲ ನನ್ನನ್ನು ಕರೆದ ತಮಗೆ ನಾನು ಚಿರಋಣಿಯಾಗಿದ್ದೇನೆ. ಈ
ನಿಮಿತ್ತದಿಂದ ಬಹುಭಾಷಿತ, ಬಹುಧರ್ಮೀಯ, ಬಹುಜನಾಂಗೀಯ
ಭಾರತ ದೇಶದ ಕಿರುಪರಿಚಯವನ್ನು ಪಡೆದುಕೊಳ್ಳುವುದು ನನಗೆ ಸಾಧ್ಯ
ವಾಗುತ್ತಿದೆ. ಅದರ ದಿಗ್ಭ್ರಮೆಗೊಳಿಸುವ ನಾನಾತ್ವ, ಇಂಥ ನಾನಾತ್ವ
ದಲ್ಲಿಯೂ ಉಳಿದುಕೊಂಡು ಬಂದಿರುವ ಆಂತರಿಕ ಏಕತ್ವ ಎಂಥವ
ರನ್ನೂ ವಿಸ್ಮಿತರನ್ನಾಗಿಮಾಡುವ ಅಂಶಗಳಾಗಿವೆ.

ಈಗ ನಮ್ಮ ಮುಂದಿರುವ ಮಹತ್ತರವಾದ ಮಣಿಹವೆಂದರೆ ಈ
ಏಕತ್ವದ ಸಂವರ್ಧನೆಯೆಂದೇ ಹೇಳಬೇಕು. ಒಳಗಿನ ಒಡಕುಗಳನ್ನೂ,
ಹೊರಗಿನ ದಾಳಿಗಳನ್ನೂ ಹೇಗೋ ಎದುರಿಸುತ್ತ ಉಳಿದುಕೊಂಡು ಬಂದಿದ್ದ
ಈ ಆಂತರಿಕ ಏಕತ್ವವು ಕಳೆದ ಕೆಲವು ವರ್ಷಗಳಲ್ಲಿ ಹಲವು ಬಗೆಯ ಒತ್ತಡ
ಗಳಿಗೆ ಒಳಗಾಗಿದೆ. ಭಾರತ ಒಂದಾಗಿ, ಬಲಶಾಲಿಯಾಗಿ, ಸಂಪತ್

ಸಮೃದ್ಧವಾಗಿ, ಎಲ್ಲ ಸವಾಲುಗಳಿಗೆ ಸಿದ್ಧವಾಗಿ, ಏಕತ್ವ-ನಿಬದ್ಧವಾಗಿ
ಉಳಿದರೆ ಮಾತ್ರ ನಮ್ಮ ಇನ್ನೆಲ್ಲ ಕನಸುಗಳನ್ನು ನನಸಾಗಿಸಿಕೊಳ್ಳ
ಬಹುದು. ಆದುದರಿಂದ ಏಕತ್ವದ ಸಾಧನೆ, ಆರಾಧನೆಗಳಿಗೆ ಎಂದೆಂ
ದಿಗೂ ಆದ್ಯತೆಯಿರಲೇಬೇಕು. ಈಗಂತೂ ಪರಮ ಪ್ರಾಥಮಿಕತೆ ಅಗತ್ಯ
ಅದಕ್ಕೆ, **Challenge of Education** ಎಂಬ ಹೊತ್ತಗೆ ಹೀಗೆ ಎತ್ತಿ,
ಒತ್ತಿ ಹೇಳಿದೆ ಇದನ್ನು:

"Despite the cultural cohesion which has characterised the Indian sub.continent for centuries, India's political unity got established only through the struggle for independance. This sense of national integration has recently been under considerable strain because of divisive forces arising from caste, religions and regional considerations. Therefore there is a widespread demand that effective counter-measures should be taken to educate people about the freedom struggle, the value of national cohesion, the danger of communal and caste fragmentation and the need to strengthen the composite culture of India to which people with diverse backgrounds have contributed. It is felt that the present scenario is an indication of the failure of the education system and at least, from now onwards, every effort should be made to see that the coming generations.will be immunised against seperatist tendencies."

ಇದರಲ್ಲಿ ಈ ದೇಶದ ಸಮಷ್ಟಿ ಸಂಸ್ಕೃತಿಯ ಸಂವರ್ಧನೆಯ ಸೂಚನೆ
ಎಲ್ಲರೂ ಗಮನಿಸಬೇಕಾದುದು. ಆರ್ಯ ದ್ರಾವಿಡರಷ್ಟೇ ಅಲ್ಲ, ಈ
ದೇಶಕ್ಕೆ ಬಂದ ಅನೇಕ ಧರ್ಮಗಳ ಜನಾಂಗಗಳ ಚಿಂತನ ಮಂಥನಗಳಿಂದ
ಕ್ರಿಯೆ ಪ್ರತಿಕ್ರಿಯೆಗಳಿಂದ, ಅಭಿರುಚಿ ಅನುಭವಗಳಿಂದ, ಸಹಕಾರ ಸಂಘ
ರ್ಷಗಳಿಂದ ಸಂಭೂತವಾಗಿದೆ ಭಾರತದ ಸಮಷ್ಟಿ ಸಂಸ್ಕೃತಿ. ಇದೇ



ಇಲ್ಲಿಯ ನಾನಾತ್ವದಲ್ಲಿಯ ಏಕತ್ವಕ್ಕೆ ಏಕಮೇವ ಆಧಾರ. ಇದು ಸನಾ
ತನವಾಗಿರುವಂತೆ ನಿತ್ಯನೂತನವೂ ಆಗುತ್ತಲಿರಬೇಕಾದುದು ಅದರ
ಆರೋಗ್ಯದ ದೃಷ್ಟಿಯಿಂದ ಅತ್ಯಗತ್ಯವಾದುದು. ಅದರ ಈಗಿನ ರೂಪ
ಶಿಷ್ಟ ಜನವರ್ಗಗಳ ಹಿತದೃಷ್ಟಿಯಿಂದ ಮೈಗೊಂಡ ರೂಪವೆಂದೇ ಹೇಳ
ಬೇಕು. ಭಾರತದ ಬಹುಜನ ಸಮಾಜವು ಭಾಗವಹಿಸದೆ ರೂಪಿತವಾಗಿ
ರುವ ಈ ಶಿಷ್ಟ ಜನ ಸೃಷ್ಟ ಸಮಷ್ಟಿ ಸಂಸ್ಕೃತಿ ದಿನದಿನಕ್ಕೆ ಹೆಚ್ಚುತ್ತ
ಲಿರುವ ಹೊಸ ಒತ್ತಡಗಳನ್ನು ತಾಳಿ ಬಾಳಲಾರದು. ಅದಕ್ಕೀಗ ಬಹು
ಜನ ಸಮಾಜವಾದ ಕೃಷಿಕರ, ಕಾರ್ಮಿಕರ, ಕಸಬುದಾರರ, ಆದಿಜನರ
ಗಿರಿಜನರ ರಕ್ತದಾನ ಬೇಕು. ಈ ಶಕ್ತರಕ್ತ ನಮ್ಮ ಸಮಷ್ಟಿ ಸಂಸ್ಕೃತಿ
ಪುರುಷನ ನರನಾಡಿಗಳಲ್ಲಿ ಸಂಚರಿಸಿ ನವಚೈತನ್ಯವನ್ನು ನೀಡಬೇಕು ಆ
ಪುರುಷನಿಗೆ. ಇದು ಶಿಕ್ಷಣದ ಸಾರ್ವತ್ರೀಕರಣದಿಂದ ಸಾಧ್ಯವಾಗುವ
ವಿಷಯ.

ಶಿಕ್ಷಣವೂ ದ್ವಿಮುಖಿಯಾದುದು. ಒಂದು ಉಪಜೀವನದಾಯಿನಿ
ಶಿಕ್ಷಣ. ಇನ್ನೊಂದು ಮನೋವಿಕಾಸಕಾರಿಣಿ ಶಿಕ್ಷಣ. ಮೊದಲನೆಯದು
ನಾಗರಿಕತೆಗೆ ನಾಂದಿಯಾಗುತ್ತದೆ. ಎರಡನೆಯದು ಸಂಸ್ಕೃತಿಯ ಸೂಲ
ಗಿತ್ತಿಯಾಗುತ್ತದೆ. ಇಂದಿಲ್ಲಿ ಪ್ರಶಸ್ತಿಗಳನ್ನು ಸ್ವೀಕರಿಸಲಿರುವ ಅಭ್ಯರ್ಥಿ
ಗಳು ಪಡೆದಿರುವುದು ಎರಡನೆಯ ಬಗೆಯ ಶಿಕ್ಷಣವನ್ನು, ಉಪಜೀವನಕ್ಕೆ
ಆಧಾರವಾಗದಿದ್ದರೂ, ನಾಗರೀಕತೆಗೆ ನೆರವಾಗದಿದ್ದರೂ, ಮನೋವಿಕಾ
ಸಕ್ಕೆ, ಸಂಸ್ಕೃತಿ ವಿಸ್ತರಣಕ್ಕೆ ಸಾಧಕವಾಗುವ ಶಿಕ್ಷಣ ನಾಗರಿಕ
ತೆಯು ಸಂಸ್ಕೃತಿಯ ಸತ್ವವನ್ನು ಹೀರಿ ಮಾನವೀಯ ಮೌಲ್ಯಗಳ ರಕ್ಷಕ
ನಾಗದಿದ್ದರೆ ಅದು ನೀಡುವ ಸಿರಿ, ಸೌಕರ್ಯ, ಸೌಲಭ್ಯಗಳೆಲ್ಲ ನಿರರ್ಥಕ
ವಾಗುವುವೆಂಬುದನ್ನು ನಮ್ಮ ಕಣ್ಣೆದುರಿಗೇ ನೋಡುತ್ತಲಿದ್ದೇವೆ. ಆದುದ
ರಿಂದ ಕೆಲವರಾದರೂ ಉಪಜೀವನದ ಸಮಸ್ಯೆಗಾಗಿ ಅಷ್ಟೊಂದು ತಲೆ ಕೆಡಿ
ಸಿಕೊಳ್ಳದೆ ಸಂಸ್ಕೃತಿ ಪ್ರಧಾನ ಶಿಕ್ಷಣಕ್ಕೆ ತಮ್ಮ ಬಾಳನ್ನು ಮುಡುಪಾಗಿ
ರಿಸಬೇಕಾಗುತ್ತದೆ. ಇಂದಿಲ್ಲಿ ಪ್ರಶಸ್ತಿಗಳನ್ನೂ ಬಹುಮಾನಗಳನ್ನೂ
ಸ್ವೀಕರಿಸಲಿರುವ ತಾವುಗಳು ಈ ವರ್ಗಕ್ಕೆ ಸೇರಿದವರೆಂದು ಹೇಳಿದರೆ ತಪ್ಪಾ
ಗದು. ಈ ದೃಷ್ಟಿಯಿಂದ ತಾವೆಲ್ಲ ಪ್ರಶಂಸನೀಯರು, ಅಭಿನಂದನೀ
ಯರು. ತಮ್ಮಿಂದ ಭಾರತದ ಸಮಷ್ಟಿ ಸಂಸ್ಕೃತಿ ಸಂಪುಷ್ಟವಾಗಲು,
ನಿಜವಾದ ಅರ್ಥದಲ್ಲಿ ಸಮಗ್ರ ಭಾರತೀಯ ಜನತೆಯ ಅಂತರ್‌ದೃಷ್ಟಿಯಾ
ಗಲು ಚಿರಂತನ ಮೌಲ್ಯಗಳ ನವೀನ ಸೃಷ್ಟಿಯಾಗಲು ಸಹಾಯವಾಗ

ಲೆಂದು ಹಾರೈಸುತ್ತೇನೆ.

ಭಾರತ ಸಮಷ್ಟಿ ಸಂಸ್ಕೃತಿಯು ವಿಭಿನ್ನ ಜನಾಂಗಗಳ, ವಿವಿಧ ಧರ್ಮಮತಗಳ ಕೊಡುಗೆಯಾಗಿರುವಂತೆ ಅನೇಕ ಭಾಷೆಗಳ ದೇಣಿಯೂ ಆಗಿದೆ. ಈ ಭಾಷೆಗಳ ಅಧ್ಯಯನ ಇದನ್ನು ಅರ್ಥಮಾಡಿಕೊಳ್ಳಲು ಅಗತ್ಯವಾದುದು. ಭಾರತದಲ್ಲಿರುವ ಎಲ್ಲ ಭಾಷೆಗಳನ್ನೂ ಎಲ್ಲರೂ ಕಲಿಯುವುದು ಸಾಧ್ಯವೂ ಅಲ್ಲ, ಅನಿವಾರ್ಯವೂ ಅಲ್ಲ. ಎಲ್ಲರಿಗೂ ಅವರವರ ಮಾತೃಭಾಷೆಯಿದೆ. ರಾಜ್ಯಕ್ಕೊಂದು ಪ್ರಾದೇಶಿಕ ಭಾಷೆಯಿದೆ, ರಾಷ್ಟ್ರಕ್ಕೊಂದು ಸಂಪರ್ಕ ಭಾಷೆಯಿದೆ. ಕೆಲವರಿಗೆ ಮಾತೃಭಾಷೆ ರಾಜ್ಯಭಾಷೆ ಒಂದೇ ಆಗಿರಬಹುದು, ಅನೇಕರಿಗೆ ಮಾತೃಭಾಷೆ, ರಾಜ್ಯಭಾಷೆ, ರಾಷ್ಟ್ರಮಟ್ಟದ ಸಂಪರ್ಕ ಭಾಷೆ ಒಂದೇ ಆಗಿರಬಹುದು. ಅವರಿಗೆ ಉಳಿದವರಿಗಿಲ್ಲದ ಭಾಷಾ ಸೌಲಭ್ಯವಿರುವುದು ನಿರ್ವಿವಾದವಾದುದು. ಹೀಗಿಲ್ಲದವರಿಗೆ ಆ ಮಟ್ಟಿಗೆ ಅಸೌಕರ್ಯವಿರುವುದೂ ನಿಜವಾದುದು. ಇಂಥವರು ವಿದ್ಯಾಭ್ಯಾಸದಲ್ಲಿ ಹಿಂದೆ ಬೀಳದಂತೆ ಸೂಕ್ತವಾದ ಏರ್ಪಾಟುಗಳನ್ನು ಶಿಕ್ಷಣಕ್ರಮದಲ್ಲಿ ಮಾಡುವುದು ಎಷ್ಟು ಆವಶ್ಯಕವೋ ಅಷ್ಟೇ ಅವಶ್ಯಕವಾದುದು ಭಾಷಿಕ ಅಲ್ಪ ಸಂಖ್ಯಾತರು ತಮ್ಮ ಮಾತೃಭಾಷೆಯನ್ನುಳಿಸಿಕೊಂಡು ರಾಜ್ಯ ಭಾಷೆಯನ್ನೂ ಚೆನ್ನಾಗಿ ಕಲಿತುಕೊಂಡು ರಾಷ್ಟ್ರಮಟ್ಟದ ಸಂಪರ್ಕ ಭಾಷೆಯನ್ನೂ ಸರಿಯಾಗಿ ಕಲಿತುಕೊಂಡು ರಾಷ್ಟ್ರದ ಮುಖ್ಯ ಪ್ರವಾಹದೊಡನೆ ಒಂದಾಗಿ ಮುಂದುವರಿಯುವುದು ಆಗಿದೆ. ಹೀಗಾದಲ್ಲಿ ಎಲ್ಲರೂ ತಮ್ಮ ರಾಷ್ಟ್ರದ ಸಮಷ್ಟಿಸಂಸ್ಕೃತಿಗೆ ತಂತಮ್ಮ ಕಾಣಿಕೆಯನ್ನು ಸಲ್ಲಿಸಲು ಸಮರ್ಥರಾಗುತ್ತಾರೆ.

ಈ ದೃಷ್ಟಿಯಿಂದ ನೋಡಿದಾಗಲೂ ಈ ಪರೀಕ್ಷಾ ಮಂಡಳಿ ನಡಸುತ್ತಿರುವ ಪರೀಕ್ಷೆಗಳು ಮುಖ್ಯವೆನಿಸುತ್ತವೆ, ಸಂಸ್ಕೃತ ನಮ್ಮ ವಿದ್ವತ್ ಪ್ರಪಂಚದ ಸಂಪರ್ಕಭಾಷೆ; ಹಿಂದಿ ನಮ್ಮ ರಾಷ್ಟ್ರಮಟ್ಟದ ಸಂಪರ್ಕಭಾಷೆ; ಉರ್ದೂ ನಮ್ಮ ಪ್ರಮುಖ ಅಲ್ಪ ಸಂಖ್ಯಾತರ ಭಾಷೆ ; ಕನ್ನಡ ಈ ರಾಜ್ಯದ ಆಡಳಿತ ಭಾಷೆ, ಪ್ರಾದೇಶಿಕ ಭಾಷೆ; ಪರಿಸರ ಭಾಷೆ, ಕ್ರಮೇಣ ಎಲ್ಲ ಹಂತಗಳಲ್ಲಿ ಶಿಕ್ಷಣದ, ನ್ಯಾಯಾಲಯಗಳ, ಲೋಕ ವ್ಯವಹಾರಗಳ ಮಾಧ್ಯಮವಾಗಲಿರುವ ಭಾಷೆ. ಆದುದರಿಂದ ಅದಕ್ಕೆ ಈ ರಾಜ್ಯದಲ್ಲಿ ಅಗ್ರಸ್ಥಾನ ಅನಿವಾರ್ಯ. ಇದನ್ನು ಈ ರಾಜ್ಯದ ಎಲ್ಲಾ ಭಾಷೆಗಳವರೂ ಒಪ್ಪಿಕೊಂಡು ಅದನ್ನು ಚೆನ್ನಾಗಿ ಕಲಿತು ಕನ್ನಡನಾಡಿನಲ್ಲೊಂದು ಸಮಷ್ಟಿಶೀಲ ಕನ್ನಡದ



ಮೂಲಕ ರೂಪುಗೊಳ್ಳುವುದಕ್ಕೆ ನೆರವಾಗಬೇಕು. ಕನ್ನಡನಾಡನ್ನು ಕನ್ನಡದ ಮೂಲಕ ಬೆಳಸಿ ತನ್ಮೂಲಕ ತಾವೂ ಬೆಳೆಯಬೇಕು.

ಕನ್ನಡ ಕಠಿಣ ಭಾಷೆಯೇನಲ್ಲ. ಮಹಲಿಂಗರಂಗ ಹೇಳಿರುವಂತೆ 'ಸುಲಿದ ಬಾಳೆಯಹಣ್ಣಿನಂದದ' ಸುಲಭ ಭಾಷೆ. ಆರು ತಿಂಗಳುಗಳಲ್ಲಿ ನಿತ್ಯ ವ್ಯವಹಾರಕ್ಕೆ ಸಾಕಾಗುವಷ್ಟು ಕನ್ನಡವನ್ನು ನಿರಾಯಾಸವಾಗಿ ಕಲಿತುಬಿಡಬಹುದು. ಆದುದರಿಂದ ಇಂಗ್ಲೀಷನ್ನೂ, ಹಿಂದಿಯನ್ನೂ ಅಗತ್ಯ ಬಿದ್ದರೆ ಫ್ರೆಂಚ್, ಜರ್ಮನ್, ರಷ್ಯನ್ ಭಾಷೆಗಳನ್ನೂ ಕಲಿಯಲು ಹಿಂಜರಿಯಬಾರದು. ಕನ್ನಡಿಗರಾಗಲಿ, ಕನ್ನಡಿಗರಲ್ಲದವರಾಗಲಿ ತಮ್ಮ ಮನ, ಮನೆಗಳಲ್ಲಿ ಕನ್ನಡ ಕಸ್ತೂರಿಯ ಕಂಪನ್ನು ತುಂಬಿಕೊಂಡು ಹಿಗ್ಗಬೇಕು.

ಕನ್ನಡ ಗ್ರಂಥಸ್ಥ ಭಾಷೆಯಾಗುವ ಮುನ್ನ ಆ ಸ್ಥಾನವನ್ನು ತಾನು ತುಂಬಿ, ಕನ್ನಡವು ಶಾಸ್ತ್ರ ಸಾಹಿತ್ಯಗಳ ಭಾಷೆಯಾದ ಮೇಲೂ ಅದು ಬೆಳೆಯಲು ಬಲಿಯಲು ನಾನಾ ವಿಧವಾದ ನೆರವು ನೀಡಿದ ಭಾಷೆ ಸಂಸ್ಕೃತ. ಕಾವ್ಯವಸ್ತು, ಶಬ್ದಭಂಡಾರ, ಶಾಸ್ತ್ರ ವಿಚಾರ, ಅಲಂಕಾರ, ಮತಧರ್ಮ, ದರ್ಶನ, ವಿಜ್ಞಾನಾದಿಗಳಲ್ಲಿ ಭಾರತದ ಇತರ ಭಾಷೆಗಳಂತೆ ಕನ್ನಡವೂ ಸಂಸ್ಕೃತದಿಂದ ಹೇರಳವಾಗಿ ಕೊಡುಗೆಗಳನ್ನು ಪಡೆದಿದೆ. ಇಂದಿಗೂ ಸಂಸ್ಕೃತದ ಮೇರು ಕೃತಿಗಳು ಕೆಲವು ನಮ್ಮ ಸೃಜನಶೀಲ ಸಾಹಿತಿಗಳಿಗೆ ನಾಟಕಕಾರರಿಗೆ, ಆಲೋಚಕರಿಗೆ, ವಿಮರ್ಶಕರಿಗೆ, ಸಂಶೋಧಕರಿಗೆ ವಸ್ತುಗಳನ್ನೂ, ವಿಚಾರಗಳನ್ನೂ ಒದಗಿಸುತ್ತಿರುವುದನ್ನು ನೋಡಿದರೆ ಕನ್ನಡ ಸಂಸ್ಕೃತಗಳ ಈ ಮಧುರ ಸಂಬಂಧ ಮುಂದೆಯೂ ಉಳಿಯುವುದೆಂಬಲ್ಲಿ ಸಂದೇಹವಿಲ್ಲ. ಈ ಸಂಬಂಧವನ್ನು ಉಳಿಸಿಕೊಳ್ಳಲು ಪ್ರೌಢಶಾಲೆಗಳಲ್ಲಿ ಅದನ್ನು ಕಡ್ಡಾಯಗೊಳಿಸದೆ ಈ ಮಂಡಳಿ ನಡೆಸುತ್ತಿರುವ ಪರೀಕ್ಷೆಗಳನ್ನೇ ಇನ್ನೂ ವ್ಯಾಪಕವಾಗಿ ನಡೆಸುವುದು ಮೇಲು.

ಇನ್ನೊಂದು ವಿಷಯವನ್ನಿಲ್ಲಿ ಪ್ರಸ್ತಾಪಿಸಲೇ ಬೇಕು. ಸಂಸ್ಕೃತವು ಕನ್ನಡಕ್ಕೆ ಕೊಟ್ಟುದೆಷ್ಟೆಂಬುದು ಸರ್ವರಿಗೂ ಗೊತ್ತಿರುವ ವಿಷಯ. ಆದರೆ ಕರ್ನಾಟಕವೂ ಸಂಸ್ಕೃತಕ್ಕೆ ಸಾಕಷ್ಟು ಕೊಟ್ಟಿದೆಯೆಂಬುದು ಸಾಕಷ್ಟು ಬೆಳಕಿಗೆ ಬಾರದಿರುವ ವಿಷಯ. ಈ ಬಗ್ಗೆ ತಾವು ಸಂಶೋಧನೆ ನಡೆಸಬೇಕು; ಮತ್ತು ಸಂಸ್ಕೃತದಿಂದ ಇನ್ನೂ ಕನ್ನಡಕ್ಕೆ ಬಾರದಿರುವ

ಸತ್ಕೃತಿ ಯಾವುದಾದರೂ ಉಳಿದಿದ್ದರೆ ಅದನ್ನು ಕನ್ನಡಕ್ಕೆ ಅನುವಾದಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕು; ಅಲ್ಲದೆ, ಕನ್ನಡದ ಸರ್ವಶ್ರೇಷ್ಠ ಕೃತಿಗಳನ್ನು ಸಂಸ್ಕೃತಕ್ಕೆ ಭಾಷಾಂತರಿಸುವ ಮಹತ್ವದ ಮಣಿಹವನ್ನು ಕೈಗೊಂಡು ಅದರಲ್ಲಿ ಯಶಸ್ಸು ಪಡೆದು ಧನ್ಯರಾಗಬೇಕು.

ಹಿಂದಿಗೆ ಸಂವಿಧಾನದಲ್ಲಿ ಸಂಪರ್ಕ ಭಾಷೆಯ ಸ್ಥಾನ ಸಿಕ್ಕು, ಕೇಂದ್ರದ ಪೋಷಣೆ ದಕ್ಕಿದ ಮೇಲೆ ಅದು ದಾಪುಗಾಲಿಡುತ್ತ ಮುನ್ನಡೆದಿದೆಯೆಂಬುದು ನಿಜ. ಆದರೂ ಅದಿನ್ನೂ ಇಂಗ್ಲೀಷಿನ ಸ್ಥಾನವನ್ನು ತುಂಬಿಲ್ಲ. ಇಂಗ್ಲೀಷೇ ಕೊನೆಯವರೆಗೆ ಇರಲಿ ಎನ್ನುವವರೂ ಇದ್ದಾರೆ; ಈಗಲೇ ಹಿಂದೀ ಇಂಗ್ಲೀಷಿನ ಸ್ಥಾನವನ್ನು ಆಕ್ರಮಿಸಿಬಿಡಲಿ-ಎನ್ನುವವರೂ ಇದ್ದಾರೆ. ಎರಡೂ ಅತಿರೇಕಗಳೇ! ಈ ದೇಶದ ಅತಿರೇಕ ಪ್ರಿಯತೆಗೆ ಇನ್ನೊಂದು ನಿದರ್ಶನವಿದು. ಹಿಂದಿಗಿರುವ ಅಲ್ಲಲ್ಲಿಯ ವಿರೋಧ ಕೇವಲ ವಿರೋಧಕ್ಕಾಗಿ ವಿರೋಧವಾಗಿರಲಾರದು. ಹೋದ ಸಲದ ಘಟಿಕೋತ್ಸವ ಭಾಷಣದಲ್ಲಿ ಸಂಸ್ಕೃತದ ಬಗ್ಗೆ ಮಾತನಾಡುತ್ತ ಪ್ರಕಾಂಡ ಪಂಡಿತರಾದ ಪ್ರೊ|| ಎಸ್. ಕೆ. ರಾಮಚಂದ್ರ ರಾಯರು ಸಂಸ್ಕೃತವು "ಕೆಲವು ವರ್ಗಗಳ ವಿಶೇಷ ಸ್ವಾರ್ಥ ಅಭಿಮಾನಕ್ಕೆ ಪಾತ್ರವಾದಾಗ ಅದರ ಹಿಡಿತ ಬಿಗಿಯಾಗಿ, ದೇಶ ಭಾಷೆಗಳ ಕೊರಳಸುತ್ತ ಉರುಳಾಯಿತು; ಜನರನ್ನು ಬಲ್ಲಿದರು–ಇತರರು, ಮೇಲೆ ಕೆಳಗೆ, ಹಿಂದೆ–ಮುಂದೆ ಎಂದು ಬೇರ್ಪಡಿಸುವ ಸಾಧನವಾಯಿತು; ಕೆಲವು ಪಂಗಡಗಳಿಗೆ ಒಣಜಂಬಕ್ಕೆ ಕಾರಣವಾಯಿತು. ಸುಲಿಗೆಯ ದಾರಿಯಾಯಿತು; ಜನರ ನಡುವೆ ವಿರಸಕ್ಕೆ ಎಡೆಮಾಡಿಕೊಟ್ಟಿತು" ಎಂದು ಸತ್ಯಪಕ್ಷಪಾತಿಗಳಾಗಿ ನುಡಿದಿದ್ದಾರೆ. ಹಿಂದಿಯ ಬಗೆಗೂ ಅನೇಕರಿಗೆ ಇಂಥವೇ ಅನುಮಾನಗಳೂ, ಭಯಗಳೂ ಇವೆ. ಇವುಗಳು ಇಲ್ಲದಂತೆ ಮಾಡುವುದು ಹಿಂದೀ ಪುರಸ್ಕರ್ತರ ಪ್ರಥಮ ಕರ್ತವ್ಯವಾಗಿದೆ. ಹೀಗೆ ಮಾಡಿದರೆ ಹಿಂದಿಗೆ, ಅದರ ಹರಡಿಕೆಗೆ ವಿರೋಧ ಉಳಿಯದು.

ಕನ್ನಡಿಗರಿಗೇನೋ ಇಂಥ ಅನುಮಾನಗಳೂ, ಭಯಗಳೂ ಇರುವಂತೆ ತೋರುವುದಿಲ್ಲ. ಯಾಕೆಂದರೆ ಇಲ್ಲಿ ಹಿಂದಿಗೆ ವಿರೋಧವೇ ಕಂಡುಬಂದಿಲ್ಲ. ಇದಕ್ಕೆ ಕನ್ನಡಿಗರ ಔದಾರ್ಯ ಕಾರಣವೆಂದು ಹೇಳುವುದಕ್ಕಿಂತ ಅವರಿಗೆ ಸ್ವಪರ ಭಾಷೆಗಳ ದೂರಗಾಮಿ ಪರಿಣಾಮಗಳ ಬಗ್ಗೆ, ಅವುಗಳ ವಿಮೋಚಕ-ಬಂಧಕ ಶಕ್ತಿಗಳ ಬಗ್ಗೆ, ಅವು ನೀಡುವ ಆತ್ಮ



ಪ್ರತ್ಯಯ—ಕೀಳರಿಮೆಗಳ ಬಗ್ಗೆ ಸ್ವಂತಿಕೆ—ಪರಾಧೀನತೆಗಳ ಬಗ್ಗೆ ಸಾಕಷ್ಟು ಅರಿವು, ಎಚ್ಚರಗಳಿಲ್ಲದಿರುವುದೇ ಕಾರಣವೆಂದು ಹೇಳುವುದು ಸರಿಯಾದೀತು. ಕನ್ನಡದ ಮೂಲಕ ಮುಕ್ತಾತ್ಮರಾಗಿ, ಸ್ವಾತ್ಮ ವಿಕಸನ ಸ್ವಶಕ್ತಿ ಪ್ರಕಾಶನಗಳ ಮೂಲಕ ಆತ್ಮ ಪ್ರತ್ಯಯವುಳ್ಳವರಾಗಿ, ಸ್ವಂತಿಕೆಯಿಂದ ಘನತೆ ಗೌರವಗಳನ್ನು ಗಳಿಸಿ, ಕನ್ನಡಿಗರಾಗಿ ಉಳಿದೇ ಕನ್ನಡಿಗರು ತಕ್ಕಷ್ಟು ಹಿಂದಿಯನ್ನು ಕಲಿಯಲಿ. ಹಿಂದಿಯವರು ಸಹ ಭಾರತದ ಬೇರೆ ಭಾಷೆಗಳನ್ನು ಕಲಿಯಲಿ, ಬೇರೆ ಭಾಷೆಗಳವರೊಡನೆ ಮಿಲಿತರಾಗಿ ಸಂವಿಧಾನವು ನಿರ್ದೇಶಿಸಿರುವಂತೆ ಈ ರಾಷ್ಟ್ರದ ಸಮಷ್ಟಿ ಸಂಸ್ಕೃತಿಯ ಸಂವಾಹಕವಾಗಬಲ್ಲ ರೀತಿಯಲ್ಲಿ ಹಿಂದೀ ಭಾಷೆಯನ್ನು ಬೆಳೆಸಲಿ; ಬೇರೆ ಭಾಷೆಗಳಿಂದಲೂ ಶಬ್ದಗಳನ್ನು ಸ್ವೀಕರಿಸಿ ಹಿಂದಿಯು ನಿಜವಾದ ಅರ್ಥದಲ್ಲಿ ಸಂಪರ್ಕ-ಸೇತುವಾಗುವಂತೆ ಮಾಡಲಿ.

ಉರ್ದೂ ಭಾಷೆಯ ಬಗ್ಗೆ ಆತ್ಮೀಯತೆ ಸಹಜ ಕನ್ನಡಿಗನಾದ ನನಗೆ ಯಾಕೆಂದರೆ ಉರ್ದೂ ಭಾಷೆಯ ತಾಯಿ ಬೇರು ದಕ್ಕನಿ ಭಾಷೆ; ಈ ದಕ್ಕನಿ ಭಾಷೆ ಉಗಮಿಸಿ ವಿಕಸಿಸಿದುದು ನಮ್ಮ ಚೆಲುವ ಕನ್ನಡ ನಾಡಿನಲ್ಲಿ. ಈ ನಾಡಿನ ಕಲಬುರಗಿ ನಗರವನ್ನು ಭಾರತದ ಮುಸಲ್ಮಾನರಿಗೆಲ್ಲ ಪವಿತ್ರ ಸ್ಥಳವನ್ನಾಗಿ ಮಾಡಿದವರು ಹಜರತ್ ಖ್ವಾಜಾ ಬಂದೇ ನವಾಜ್ ಗೇಸೂದರಾಜ್ ಅವರು ಕ್ರಿ.ಶ. 1321 ರಲ್ಲಿ ದೆಹಲಿಯಲ್ಲಿ ಜನ್ಮ ತಳೆದ ಅವರು ತೈಮೂರನ ದಾಳಿಗಿಂತ ಮುಂಚೆ ಕಲಬುರಗಿಗೆ ಬಂದು ಅಲ್ಲಿಯೇ ನೆಲೆಯಾಗಿ ನಿಂತರು. ಅವರು ದಕ್ಕನಿ ಭಾಷೆಯ ಜನಕರೆಂದು ಹೇಳಬಹುದಾಗಿದೆ. ಅವರ ಈಗ ಉಪಲಬ್ಧವಿರುವ 36 ಗ್ರಂಥಗಳಲ್ಲಿ "ಅಸ್‌ಮಾರುಲ್ ಅಸರಾರ್" "ಅದಾ ಬುಲ್ ಮುರೀದೈನ್" "ಬುರ್‌ಹಾನುಲ್ ಆಹಿ ಹೈನ್" ಮತ್ತು "ಹಜ್ಜಾಯ ರುಲ್ ಖುದ್ಸ್" ಬಹಳ ಮುಖ್ಯವಾದವುಗಳು. ಇವುಗಳಲ್ಲಿ ಇಸ್ಲಾಮಿನ ಬೆಳಕಿನಲ್ಲಿ ಇಹಲೋಕದ ಜೀವನ, ಧರ್ಮ, ಭಕ್ತ-ಭಗವಂತರ ಸಂಬಂಧ ಇತ್ಯಾದಿ ವಿಷಯಗಳ ವಿವೇಚನೆಯಿದೆ. ಇವರು ಪೈಂಗಬರವಾಸಿಗಳಾದುದು ಕ್ರಿ.ಶ. 1421 ರಲ್ಲಿ.

ಇವರ ತರುವಾಯ ಪ್ರಸಿದ್ಧರಾದವರು ಹಜರತ್ ಮೀರಾಂಜಿ ಷಮ್ಸ್ಯುಲ್ ಷಾಹ ಅವರು. ಮಕ್ಕಾದಲ್ಲಿ ಹುಟ್ಟಿದ ಇವರು ವಿಜಾಪುರಕ್ಕೆ ಬಂದು ಅಲ್ಲಿ ಹಜರತ್‌ಕಮಾಲುದ್ದೀನ್ ಬಯಾಬಾನಿ ಅವರಶಿಷ್ಯರಾದರು. ಇವರಿಂದ ರಚಿತವಾಗಿ ಪ್ರಸಿದ್ಧವಾಗಿರುವ ಕೃತಿಗಳಾದ ಖುಷ್‌ನಾಮಾ

'ಖುಷ್ ನಗ್ಜ್' 'ಶಹಾತತುಕ್ ತಹಕೀಕ್' ಇವರ ಹೆಸರನ್ನು ದಕ್ಕನಿ ಸಾಹಿತ್ಯದಲ್ಲಿ ಅಜರಾಮರಗೊಳಿಸಿವೆ. ಇವರು ಪೈಗಂಬರವಾಸಿಗಳಾದುದು ಕ್ರಿ.ಶ. 1496 ರಲ್ಲಿ.

ಇವರ ಸಮಕಾಲೀನರಾಗಿದ್ದ ಸೈಯದ್ ಷಾಹ ಅಷರಫಿ ಬಯಾಬಾನಿ ಅವರ "ಲಾಜಿಮುಲ್ ಮುಬ್‌ತದಾ" "ವಾಹದ ಬಾರಿ" ಮತ್ತು "ನೌ ಸರ ಹಾರ್" ಉಲ್ಲೇಖನೀಯ ಕೃತಿಗಳು. ಮೀರಾಂಜಿ ಅವರ ಪುತ್ರರಾದ ಬುರ್‌ಹಾನುದ್ದೀನ್ ಜಾನಮ್ ಅವರ "ಇರ್ ಷಾದ ನಾಮಾ" "ವಸೀಯತುಲ್ ಹಾದಿ" "ಬಷಾರ ಈಮಾನಿ" "ಸುಖ—ಸುಹೇಲಾ" ಮತ್ತು "ಮುನ್ ಫತುಲ್ ಈಮಾನಿ" ಎಂಬ ಕೃತಿಗಳು ಪ್ರಸಿದ್ಧವಾದವುಗಳು. ಅಮೀನುದ್ದೀನ್ ಅಲೀಆಲಾ ಅವರ "ಕಲೀಮತುಲ್ ಹೆಕಾಯಕ್" ಉರ್ದೂ ಭಾಷೆಯ ಪ್ರಪ್ರಥಮ ಗದ್ಯ ಗ್ರಂಥವಾಗಿದೆ. ಮುಲ್ಲಾ ವಜಹೀ ಅವರ "ತಾಜುಲ್ ಹಕಾಯ್", ಮಿರಾನ್ ಹಾಷಿಮಿ ಅವರ "ಮೇರಾಜ್ ನಾಮಾ", ಮಖ್‌ದೂಮ್ ರಾಹೆ ಹುಸೇನಿ ಅವರ "ತಿಲಾನತುಲ್-ವಜೂದ", ಸಿರಾದಲ್ಲಿದ್ದ ಆರಿಫ್‌ಷಾಹ ಖಾದ್ರಿ, ನೆಲಮಂಗಲದ ಷಾಹ ಸದರದ್ದೀನ್, ಕೋಲಾರದ ಹಜರತ್ ಅಹಮದ್ ಖಾನ್ ಷೀರಾನಿ ಮೈಸೂರಿನ ಅಬ್ದುಲ್ ರಹೀಂ ದರ್ಗಾಡಿ ಮತ್ತು ಹೈ ವಾಯೀಜ್ ಮುಂತಾದವರ ಮಹತ್ವದ ಕೃತಿಗಳು ಉರ್ದೂ ಪ್ರಪಂಚದಲ್ಲಿ ಕರ್ನಾಟಕಕ್ಕೆ ಹೆಮ್ಮೆಯ ಸ್ಥಾನವನ್ನು ನೀಡಿವೆ. ಇಂದು ಉರ್ದೂ ಮುನ್ಷಿ ಪ್ರಶಸ್ತಿ ಸ್ವೀಕರಿಸಲಿರುವ ಅಭ್ಯರ್ಥಿಗಳು ಕರ್ನಾಟಕವು ದಕ್ಕನಿ ಹಾಗೂ ಉರ್ದೂ ಭಾಷೆಗಳ ಬೆಳವಣಿಗೆಗೆ ನೀಡಿದ ಕೊಡುಗೆಗಳ ಬಗ್ಗೆ ಸಂಶೋಧನೆ ನಡೆಸುವುದಲ್ಲದೆ ಮಹತ್ವದ ಉರ್ದೂ ಕೃತಿಗಳನ್ನು ಕನ್ನಡಕ್ಕೂ, ಮಹತ್ವದ ಕನ್ನಡ ಕೃತಿಗಳನ್ನು ಉರ್ದೂ ಭಾಷೆಗೂ ಅನುವಾದಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳುವರೆಂದು ಆಶಿಸುತ್ತೇನೆ.

ಚಿತ್ರಕಲೆಗೂ ಕರ್ನಾಟಕದ ಕೊಡುಗೆ ಚಿರಸ್ಮರಣೀಯವಾದುದು. ವಿಶ್ವವಿಖ್ಯಾತ ಅಜಂತಾ ಗುಹಾಂತರ್ಗತ ದೇವಾಲಯಗಳ ಚಿರವಿನೂತನ ಚಿತ್ರಗಳನ್ನು ಬರೆಸಿದವರು ಚಾಲುಕ್ಯ ಚಕ್ರಾಧಿಪತಿಗಳೆಂಬುದು ಯಾವ ಕನ್ನಡಿಗನಿಗೆ ಹೆಮ್ಮೆಯನ್ನು ಹುಟ್ಟಿಸದಿರದು ? ಇತಿಹಾಸದ ಆರಂಭ ಕಾಲದಿಂದಲೇ ಬೆಣಕಲ್, ತೆಕ್ಕಲಕೋಟೆ, ಸನಗನಕಲ್ಲು, ತಾವರೆಗೆರೆ, ಗೊಂಬಿಗುಡ್ಡ, ವಾಲದಿಬ್ಬ, ಸಿಡಿಲುಗುಂಡಿ ಮುಂತಾದ ಕಡೆಗಳಲ್ಲಿ ಆದಿಮಾನವನ ಕಲಾಚೇತನಕ್ಕೆ ಸಾಕ್ಷಿಯಾಗಿರುವ ಗವಿಚಿತ್ರಗಳನ್ನೂ, ಚಂದ್ರ



ವಳ್ಳಿ, ಮಾಸ್ಕಿ, ಹೆಮ್ಮಿಗೆ, ಹೆರಕಲ್ಲು, ಬ್ರಹ್ಮಗಿರಿ, ಮಾದವಪುರ, ಬೆಂಗಳೂರು, ಮಡಗಾಂವ್ ಇತ್ಯಾದಿ ಸ್ಥಳಗಳಲ್ಲಿ ಸಚಿತ್ರ ಭಾಂಡಗಳನ್ನೂ ಕೊಟ್ಟ ಕರ್ನಾಟಕವು ಚಿತ್ರಕಲೆಯು ಚರಮಸೀಮೆಯನ್ನು ಮುಟ್ಟಿರುವ ಅಜಂತೆಯನ್ನು ಕೊಟ್ಟುದು ಅಚ್ಚರಿಯಲ್ಲ.

ಬಾದಾಮಿಯ ಚಾಲುಕ್ಯ ಚಕ್ರವರ್ತಿಗಳ ಕಾಲದಲ್ಲಿಯೇ ಚಿತ್ರಿತವಾದ ಬಾದಾಮಿ ಗುಹೆಗಳ ಭಿತ್ತಿ ಚಿತ್ರಗಳು. ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ ಶ್ರವಣಬೆಳಗೊಳದ ಶಾಂತಿನಾಥ ಬಸದಿಯ ಭಿತ್ತಿಗಳು ಹಾಗೂ ಚಾವಣಿಗಳು ಹೊಂದಿದ್ದ ಚಿತ್ರಗಳು, ವಿಜಯನಗರ ಸಾಮ್ರಾಟರ ಕಾಲದಲ್ಲಿ ಪರಮೋನ್ನತಿಯನ್ನು ಪಡೆದ ವರ್ಣಚಿತ್ರ ಕಲೆಯ ಮಾದರಿಗಳಾಗಿ ಕನ್ನಡರಾಜ್ಯ ರಮಾರಮಣ ಕೃಷ್ಣದೇವರಾಯನು ಕ್ಷೇತ್ರಾಧಿಪತಿ ವಿರೂಪಾಕ್ಷದೇವಾಲಯದ ಮುಂದೆ ಕಟ್ಟಿಸಿದ ರಂಗಮಂಟಪದ ಚಾವಣಿ ಹಾಗೂ ತೊಲೆಗಳಲ್ಲಿರುವ ಚಿತ್ರಗಳು, ಲೇಪಾಕ್ಷಿಯಲ್ಲಿ ವಿರುಪಣ್ಣ ಭಂಡಾರಿ ಕಟ್ಟಿಸಿದ ವೀರಭದ್ರಸ್ವಾಮಿಯ ದೇವಾಲಯದಲ್ಲಿ ಅಜಂತೆಯ ಕಲೆಗೆ ಹೆಗಲೆಣೆಯಾಗಿ ಮೆರೆಯುತ್ತಿರುವ ಅನನ್ಯ ಲಾವಣ್ಯದ ಚಿತ್ರಗಳು, ಚಿತ್ರದುರ್ಗದ ಅಂಕಳಿಸ್ವಾಮಿ ಗುಹೆಯ ಚಿತ್ರಗಳು, ಎಡೆಯೂರಿನ ಸಿದ್ಧಲಿಂಗೇಶ್ವರ ದೇವಾಲಯದ ಚಿತ್ರಗಳು ಬೆಳವಾಡಿಯ ಮಂಟೇಸ್ವಾಮಿಮಠದ ಚಿತ್ರಗಳು ಅಥಣಿಯ ಶಿವಯೋಗಿ ಮಠ, ನಿಪ್ಪಾಣಿಯ ರಾಜವಾಡೆ. ಕರವಾಡ, ನರಗುಂದದ ಕೋಟೆಯೊಳಗಿನ ಅರಮನೆಗಳ ಚಿತ್ರಗಳು, ಮುಡುಕುತೊರೆ ಮಲ್ಲಿಕಾರ್ಜುನಸ್ವಾಮಿ ದೇವಾಲಯದ ಚಿತ್ರಗಳು, ಶ್ರವಣಬೆಳಗೊಳದ ಜೈನಮಠದ ಚಿತ್ರಗಳು. ಮೈಸೂರರಸರ ಚಿತ್ರಕಲಾಪ್ರೇಮಕ್ಕೆ ಬೃಹತ್ ಸಾಕ್ಷಿಯಂತಿರುವ 'ಶ್ರೀತತ್ವನಿಧಿ'ಯ 1886 ವರ್ಣರಂಜಿತ ರೇಖಾ ಚಿತ್ರಗಳು ಕರ್ನಾಟಕವು ಚಿತ್ರಕಲೆಗೆ ನೀಡಿದ ಮಹತ್ತರವಾದ ಕೊಡುಗೆಯನ್ನು ಸಂಕೇತಿಸುತ್ತಿವೆ. ಟಿಪ್ಪುವಿನ 'ದರಿಯಾ ದೌಲತ್' ಕರ್ನಾಟಕದ ಇನ್ನೊಂದು ಹೆಮ್ಮೆಯ ಕೊಡುಗೆ.

ಇಂದು ಚಿತ್ರಕಲೆಯಲ್ಲಿ ಪರಿಣತಿ ಪಡೆದು ಪ್ರಶಸ್ತಿ ಸ್ವೀಕರಿಸುತ್ತಲಿರುವ ನಮ್ಮ ಅಭಿಮಾನ ಪಾತ್ರರಾದ ಅಭ್ಯರ್ಥಿಗಳು ಕರ್ನಾಟಕದ ಈ ಕೊಡುಗೆಯ ಬಗ್ಗೆ ಆಮೂಲಾಗ್ರ ಸಂಶೋಧನೆ ನಡಸಿ ಅದರ ನೆಲೆಬೆಲೆಗಳನ್ನು ನಿರ್ಧರಿಸಬೇಕು; ಅಂತೆಯೇ ಈ ಕಾಲದಲ್ಲಿಯೂ ಚಿತ್ರಕಲಾ ಪ್ರಪಂಚದಲ್ಲಿ ಕರ್ನಾಟಕಕ್ಕೆ ಕೀರ್ತಿಯನ್ನು ತಂದ ಕಲಾತಪಸ್ವಿ

ಕೆ. ವೆಂಕಟಪ್ಪ, ಹೆಬ್ಬಾರ,ಮಿಣಜಿಗಿ,ದಂಡಾವತಿ ಮಠ ಮೊದಲಾದವರಿಂದ ಸ್ಫೂರ್ತಿ ಪ್ರೇರಣೆಗಳನ್ನು ಪಡೆದು ಈ ಕಲೆಗೆ ತಮ್ಮ ಕೊಡುಗೆಯನ್ನೂ ನೀಡಬೇಕು.

ಭಾರತೀಯ ಸಂಗೀತವು ಕರ್ನಾಟಕ ಸಂಗೀತ ಮತ್ತು ಹಿಂದುಸ್ತಾನಿ ಸಂಗೀತವೆಂದು ಎರಡು ಶಾಖೆಗಳಾದುದು ಪ್ರಾಯಶಃ ಮಧ್ಯ ಯುಗದಲ್ಲಿ. ಕರ್ಣಾಟಕ ಸಂಗೀತಕ್ಕಂತೂ ಪುರಂದರದಾಸರೇ ಪಿತಾಮಹರೆಂದು ಖ್ಯಾತರಾಗಿದ್ದಾರೆ. ಹಿಂದುಸ್ತಾನಿ ಸಂಗೀತಕ್ಕೂ ಕರ್ನಾಟಕದ ಕೊಡುಗೆ ಸಾಮಾನ್ಯವಾದುದೇನಲ್ಲ. ಪ್ರಚಲಿತ ಸಂಗೀತಕ್ಕೆ ಹೊಸ ಸ್ವರೂಪ ಕೊಡುವುದಲ್ಲದೆ ಹೊಸ ಮಾರ್ಗದತ್ತ ಅದನ್ನು ಕೊಂಡೊಯ್ಯುವಲ್ಲಿ ಕರ್ನಾಟಕವು ವಹಿಸಿದ ಪಾತ್ರ ಪ್ರಶಂಸನೀಯ. ಇನ್ನೊಂದು ಹೆಮ್ಮೆಯ ಸಂಗತಿಯೆಂದರೆ ಸಂಗೀತವನ್ನು ಕುರಿತ ಪ್ರಮುಖ ಆಧಾರ ಗ್ರಂಥಗಳು ಕರ್ನಾಟಕದಲ್ಲಿಯೇ ರಚಿತವಾದುವು; ಇಲ್ಲವೆ ಕರ್ನಾಟಕದ ಹೊರಗೆ ಕರ್ನಾಟಕದವರಿಂದಲೇ ರಚಿತವಾದುವು. ಚಾಳುಕ್ಯ ಚಕ್ರೇಶ್ವರ ಮುಮ್ಮಡಿ ಭೂಲೋಕಮಲ್ಲ ಸೋಮೇಶ್ವರನ "ರಾಜಮಾನಸೋಲ್ಲಾಸಾ," ಜಗದೇಕಮಲ್ಲನ "ಸಂಗೀತ ಚೂಡಾಮಣಿ", ಸಾರಂಗದೇವನ "ಸಂಗೀತ ರತ್ನಾಕರ", ಇದಕ್ಕೆ ಕಲ್ಲಿನಾಥನಿಂದ ರಚಿತವಾದ "ಕಳಾನಿಧಿ"ಯೆಂಬ ಪ್ರಗಲ್ಭ ಭಾಷ್ಯ, ಬಂಡಾರು ಲಕ್ಷ್ಮೀನಾರಾಯಣ ವಿರಚಿತ "ಸಂಗೀತ ಸೂರ್ಯೋದಯ" ರಾಮಾತ್ಯನ "ಸ್ವರಮೇಳ ಕಳಾನಿಧಿ", ಇಮ್ಮಡಿ ಬಸಪ್ಪನಾಯಕನ "ಶಿವತತ್ವ ರತ್ನಾಕರ" ನಿಜಗುಣ ಶಿವಯೋಗಿಗಳ "ವಿವೇಕ ಚಿಂತಾಮಣಿ", ಸುಲ್ತಾನ ಇಮ್ಮಡಿ ಇಬ್ರಾಹಿಮ್ ಆದಿಲ್‌ಖಾನನ "ಕಿತಾಬ-ಎ-ನವರಸ್" ಬಿಜ್ಜವರದ ಮುಮ್ಮಡಿ ಚಿಕ್ಕಭೂಪಾಲನ "ಅಭಿನವಭರತಸಾರಸಂಗ್ರಹ" ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ "ಶ್ರೀ ತತ್ವನಿಧಿ" ಇವೆಲ್ಲ ಕರ್ನಾಟಕದಲ್ಲಿಯೇ ರಚಿತವಾದ ಪ್ರಮಾಣ ಗ್ರಂಥಗಳು.

ಕರ್ನಾಟಕದ ಹೊರಗೆ ಕರ್ನಾಟಕದವರಿಂದ ರಚಿತವಾದ ಆಧಾರ ಗ್ರಂಥಗಳಲ್ಲಿ, ಆಕರ ಗ್ರಂಥಗಳಲ್ಲಿ ಮಿಥಿಲೆಯ ರಾಷ್ಟ್ರಕೂಟ ವಂಶಸ್ಥ ಪ್ರಭು ಮಾತೃದೇವನ "ಸರಸ್ವತೀ ಹೃದಯಾಲಂಕಾರ", ಸಾತನೂರಿನ ಪುಂಡರೀಕ ವಿಠಲನ "ಸದ್ರಾಗ ಚಂದ್ರೋದಯ", "ರಾಗಮಂಜರಿ" "ರಾಗಮೇಳ" "ನರ್ತನ ನಿರ್ಣಯ"ಗಳು, ತಂಜಾವೂರಿನ ದೊರೆ ರಘುನಾಥ ನಾಯಕನ ಮುಖ್ಯಮಂತ್ರಿಯಾಗಿದ್ದ ಗೋವಿಂದ ದೀಕ್ಷಿತ ವಿರಚಿತ



"ಸಂಗೀತ ಸುಧಾ", ಅವನ ಮಗ ವೆಂಕಟಮುಖಿಯ "ಚತುರ್ದಂಡಿ ಪ್ರಕಾಶಿಕಾ" ಇತ್ಯಾದಿಗಳು ವಿಖ್ಯಾತವಾಗಿವೆ.

ಕರ್ನಾಟಕದಲ್ಲಿ ಸಂಗೀತ ಕಲೆ ಗತವೈಭವದ ಗುರುತಾಗಿ ಮಾತ್ರ ಉಳಿದಿಲ್ಲ. ಈ ಶತಮಾನದಲ್ಲಿಯೂ ವೀಣೆ ಶೇಷಣ್ಣನವರು, ಮೈಸೂರು ಸದಾಶಿವರಾಯರು, ಬಿಡಾರದ ಕೃಷ್ಣಪ್ಪನವರು, ವಾಸುದೇವಾಚಾರ್ಯರು, ಟಿ. ಚೌಡಯ್ಯನವರು, ದೊರೆಸ್ವಾಮಿ ಅಯ್ಯಂಗಾರ್, ಸವಾಯಿಗಂಧರ್ವ, ಕುಮಾರಗಂಧರ್ವ,ಮಲ್ಲಿಕಾರ್ಜುನ ಮನ್ಸೂರ,ಗಂಗೂಬಾಯಿ ಹಾನಗಲ್, ಭೀಮಸೇನಜೋಷಿ, ಬಸವರಾಜ ರಾಜಗುರು ಮೊದಲಾದ ವಿಖ್ಯಾತ ಸಂಗೀತಕಲಾ ಪ್ರಪೂರ್ಣರನ್ನು ಕೊಟ್ಟ ಕೀರ್ತಿ ಕರ್ನಾಟಕದ್ದು. ಇವರ ಪಾವನ ಪರಂಪರೆಯನ್ನು ಮುಂದುವರಿಸುವುದು ಈಗ ಪ್ರಶಸ್ತಿಪಡೆಯುತ್ತಲಿರುವ ಅಭ್ಯರ್ಥಿಗಳ ಕರ್ತವ್ಯವಾಗಿದೆ. ಇದನ್ನವರು ಸತತ ಸಾಧನೆಯಿಂದ ಪೂರ್ಣಗೊಳಿಸಿ ತೋರಿಸುವರೆಂದು ನೆರೆ ನಂಬಿದ್ದೇನೆ.

ಕೊನೆಯದಾಗಿ ನನ್ನ ಮಾತುಗಳನ್ನು ಚಿತ್ತವಿಟ್ಟು ಲಾಲಿಸಿದ ತಮ್ಮೆಲ್ಲರಿಗೂ ನನ್ನ ಕೃತಜ್ಞತೆಯ ಕಾಣಿಕೆಯನ್ನು ಅರ್ಪಿಸುತ್ತೇನೆ; ಕರ್ನಾಟಕ ಪ್ರೌಢ ಶಿಕ್ಷಣಪರೀಕ್ಷಾ ಮಂಡಳಿಯ ಪದಾಧಿಕಾರಿಗಳಿಗೆ ನೆನಿಕೆಗಳನ್ನು ಸಲ್ಲಿಸುತ್ತೇನೆ; ಇಂದು ಪ್ರಶಸ್ತಿಗಳನ್ನು ಸ್ವೀಕರಿಸಿದ ಅಭ್ಯರ್ಥಿಗಳಿಗೆ ಅವರ ಆಸಕ್ತಿಯ ವಿಷಯದಲ್ಲಿ ಪರಿಣತಿಯನ್ನೂ, ಅವರ ಜೀವನದಲ್ಲಿ ಯಶಸ್ಸನ್ನೂ ಕರುಣಿಸಲು ಕನ್ನಡ ತಾಯಿಯನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

**ಜಯ ಭಾರತ ಜನನಿಯ ತನುಜಾತೆ-ಜಯಹೇ ಕರ್ನಾಟಕ ಮಾತೆ!**

———